ಆರ್. ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **15.12.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಅರ್ಜಿದಾರರ ಪರ : ವಕೀಲರಿಂದ:**

ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಕರಾರನ್ನು ಸಲ್ಲಿಸಿರುತ್ತೇನೆ. ಸದರಿ ತಕರಾರಿನ ಸಂಗತಿಗಳು ನನಗೆ ಗೊತ್ತಿರುತ್ತದೆ. ನನ್ನ ಪ್ರಮಾಣ ಪತ್ರದ ಸಂಗತಿಗಳು ಮರೆತುಹೋಗಿರುತ್ತದೆ. ನಾನು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ನಾನು ವಂಶವೃಕ್ಷವನ್ನು ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನ ವಂಶಸ್ಥರು ಚಿಕ್ಕಪುಟ್ಟೇಗೌಡ, ನಾರಾಯಣ, ಬಂದಿಗೇಗೌಡ ಆಗಿರುತ್ತಾರೆ. ನಮ್ಮ ಅಜ್ಜಿಗೆ ನಮ್ಮ ತಾಯಿ ಒಬ್ಬರೇ ಮಗಳು ಆಗಿರುತ್ತಾರೆ. ನನ್ನ ತಾತ ನಂಜೇಗೌಡರವರನ್ನು **2**ನೇ ಹೆಂಡತಿಯಾಗಿ ಚೆನ್ನಮ್ಮ ರವರನ್ನು ವಿವಾಹವಾಗಿರುತ್ತಾರೆ. ಮೇಲೆ ಹೇಳಿದ ಚಿಕ್ಕಪುಟ್ಟೇಗೌಡ, ನಾರಾಯಣ ಮತ್ತು ಬಂದಿಗೇಗೌಡರವರನ್ನು ವಂಶವೃಕ್ಷದಲ್ಲಿ ತೋರಿಸಿರುವುದಿಲ್ಲ. ವಂಶವೃಕ್ಷದಲ್ಲಿ ಸದರಿಯವರು ಯಾವ ರೀತಿ ಸಂಬಂಧಿಕರು ಎಂಧು ಹೇಳಿರುತ್ತೇನೆ. ನಾನು ಆ ರೀತಿ ಹೇಳದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ನಂಜೇಗೌಡ ಮತ್ತು ಚೆನ್ನಮ್ಮರವರಿಗೆ ಮಾದಯ್ಯ **@** ಮಾದೇಗೌಡ ಮತ್ತು ನಂಜಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಮಾದಮ್ಮರವರು ಮಳವಳ್ಳಿಯವರು ಆಗಿರುತ್ತಾರೆ. ಮಾದಮ್ಮರವರ ತಂದೆ ತಾಯಿ ಹೆಸರು ಗೊತ್ತಿರುವುದಿಲ್ಲ. ಮಾದಮ್ಮರವರು ಯಾವಾಗ ವಿವಾಹ ಆಗಿರುತ್ತಾರೆ ಮತ್ತು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮಾದಮ್ಮರವರು ನಂಜೇಗೌಡರವರನ್ನು ವಿವಾಹವಾಗಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ಸದರಿಯವರು ಮಾದಮ್ಮ ರವರನ್ನು ವಿವಾಹವಾಗಿರಲಿಲ್ಲ ಎಂದರೆ ಸರಿಯಲ್ಲ. ಚೆನ್ನಮ್ಮರವರ ಮೊಮ್ಮಗ ಈಗ ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**3.** ಅರ್ಜಿದಾರರು ಸಲ್ಲಿಸಿರುವ ವಂಶವೃಕ್ಷವನ್ನು ಪರೀಶೀಲಿಸಿರುತ್ತೀರಾ ಎಂದರೆ ಸಾಕ್ಷಿಯು ಸಮರ್ಪಕವಾಗಿ ಉತ್ತರಿಸಿರುವುದಿಲ್ಲ. ಅರ್ಜಿದಾರರು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿರುತ್ತದೆ.

**ಸಾಕ್ಷಿಯು ವಾಟೀ ಸವಾಲಿಗೆ ಬೆಂಬಲ ನೀಡದ ಕಾರಣ ಮುಂದಿನ ವಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆಎಂಎಫ್‌ಸಿ ಮಳವಳ್ಳಿ.